


### ರೋಮಾಂಚನಕಾರಿ ಗುಪ್ತ ಖಾಲ್

ಸ್ವರ್ಗದಿಂದ ಸ್ವರ್ಗಕ್ಕೆ ಪಯಣ– ಆರ್.ವಿಶ್ವನಾಥ್‌ರ ಮುಖಪುಟ ಲೇಖನ ಓದುತ್ತಾ ಹೋದಂತೆಲ್ಲಾ ಮೈ–ಮನ ರೋಮಾಂಚನವಾಯಿತು. ಹಿಮಾಲಯ ಪರ್ವತ ಕಣ್ಣ ಮುಂದೆ ಬಂದಂತಾಯ್ತು.

–ನಾಗರಾಜ ಬಣಕಾರ್, ಕೊಟ್ಟೂರು/ ಶೋಭಾ ಅರಸು, ತೆಕ್ಕಟ್ಟೆ

### ಅನಾಯಾಸ ಹಣದಿಂದ ಅಡ್ಡ ದಾರಿ

ಅನಾಯಾಸವಾಗಿ ಕೀರ್ತಿ, ಹಣ, ಗ್ಲಾಮರ್, ದಿಢೀರ್ ಜನಪ್ರಿಯತೆ ಗಳಿಸುವ ಕೆಲವು ಕಲಾವಿದರು(ಎಲ್ಲರೂ ಅಲ್ಲ) ಹೇಗೆ ವರ್ತಿಸುತ್ತಾರೆ ಎಂಬುದಕ್ಕೆ ಎನ್.ಉದಯಕುಮಾರರ ತೆಲುಗು ಚಿತ್ರರಂಗದ 'ಟಾಲಿವುಡ್ ಕಾಡಿನ ಬೆಂಕಿ' ಬೆಳಕು ಚೆಲ್ಲಿದೆ.

–ಎಂ.ಜಿ.ರಾಜಶೇಖರ ಶೆಟ್ಟಿ, ದೊಡ್ಡಬಳ್ಳಾಪುರ

### ಔಷಧಿಯುಕ್ತ ಕಲ್ಲಂಗಡ್ಲೆ

'ನೈಸರ್ಗಿಕ ನೋವು ನಿವಾರಕ ಕಲ್ಲಂಗಡ್ಲೆ' (ಸೌಖ್ಯಾ ಮೋಹನ್ ತಲಕಾಲುಕೊಪ್ಪ) ಕಲ್ಲಂಗಡ್ಲೆ ಗಿಡಗಳನ್ನು ನೋಡಿದ್ದ ನನಗೆ ಇದರಿಂದ ಹಲವು ಔಷಧಿಯುಕ್ತ ತಯಾರಿಸಬಹುದೆಂದು ತಿಳಿದು ಸಂತೋಷವಾಯಿತು.

–ಎಂ.ಆರ್. ಲಕ್ಷ್ಮಣರಾವ್, ದಾವಣಗೆರೆ

### ಅಮೆರಿಕದಲ್ಲಿ ಕನ್ನಡತಿ ಜಯಭೇರಿ

ಭಾರತದ ಮೊಟ್ಟ ಮೊದಲ ಧ್ವನಿ ಮಾಯ ಕಲಾವಿದೆಯಾದ ಕನ್ನಡತಿ ಇಂದುಶ್ರೀ ಅಮೆರಿಕದಲ್ಲಿ ಯಶಸ್ವಿ ಪ್ರದರ್ಶನ ನೀಡಿದ ಸಂಗತಿ ಮೆಚ್ಚುವಂತಹದು. ಇಂದುಶ್ರೀ ಕಿರಿಯ ವಯಸ್ಸಿನಲ್ಲಿಯೇ ಹಿರಿದಾದ ಸಾಧನೆ ಮಾಡಿದ್ದಾರೆ. ಸುಧಾದ ಜನಪ್ರಿಯ ಕಾಲಂ 'ನೀವು ಕೇಳಿದಿರಿ'ಯಲ್ಲಿ ಓದುಗರ ಪ್ರಶ್ನೆಗಳಿಗೆ ಮಾರ್ಮಿಕ ಉತ್ತರ ನೀಡುವ ರಾಮ್ ಮಾರ್ಗದರ್ಶನ ಅವರಿಗೆ ಒಳ್ಳೆಯದೇ ಆಗಿರಬೇಕು.

–ವಿಭಾ ಮುರಳೀಧರ್, ತುಮಕೂರು/ ರವೀಂದ್ರನಾಥ ಯಡಹಳ್ಳಿ, ಬೀಳಗಿ

### ವೈದ್ಯರ ಬಣ್ಣ ಬಯಲು ಮಾಡಿದ ಕಥೆ

ಹೇಮಂತ ಕುಮಾರ ದೇಸಾಯಿಯವರ 'ಬಾಪೂಜಿ ಸ್ಕ್ಯಾನಿಂಗ್ ಸೆಂಟರ್' ಕಥೆ ಚೆನ್ನಾಗಿತ್ತು. ಜನರ ಪ್ರಾಣ, ಆರೋಗ್ಯ ಕಾಪಾಡಬೇಕಾದ ವೈದ್ಯರುಗಳೇ ಆ ಟೆಸ್ಟ್ ಈ ಟೆಸ್ಟ್ ಎಂದು ಜನಸಾಮಾನ್ಯರನ್ನು ಹಿಂಡಿ ಹಿಪ್ಪಿ ಮಾಡುವುದನ್ನು ಕಥೆ ಹೃದಯಂಗಮವಾಗಿ ಕಟ್ಟಿಕೊಟ್ಟಿದೆ. ಗೌತಂನಂತಹ ಪ್ರಾಮಾಣಿಕ ವೈದ್ಯರು ಇಲ್ಲವೆಂದಲ್ಲ. ಆದರೆ ಸುಲಿಗೆ ಮಾಡುವ ವೈದ್ಯರ ಸಂಖ್ಯೆಯೇ ಹೆಚ್ಚು– ಅದೂ ನಗರ ಪ್ರದೇಶಗಳಲ್ಲಿ.

–ಸುಧಾ ರಾಜ್, ಮೈಸೂರು/ ತರಂಗಿಣಿ, ತುಮಕೂರು/ ಕೊಹಿಮ, ಬಸರಕೋಡು/ ನೆ.ಸು.ಆನಂದ, ಕತ್ತರಗುಪ್ಪ/ ರುದ್ರೇಶ್, ನಾರಾಯಣರಾವ್, ಬೆಂಗಳೂರು

### ಎರಡು ಕಥೆ ಪ್ರಕಟಿಸಿ

'ಬಾಪೂಜಿ ಸ್ಕ್ಯಾನಿಂಗ್ ಸೆಂಟರ್' ಕಥೆ ಚೆನ್ನಾಗಿತ್ತು. 'ಧ್ವನಿ ಮಾಯೆ'ಯ ಮೋಹ' ಅದೂ ಚೆನ್ನಾಗಿತ್ತು. 'ಸುಧಾ' ವಾರಪತ್ರಿಕೆಯಲ್ಲಿ ಒಂದು ಕಥೆಯ ಬದಲು ಎರಡು ಕಥೆಗಳನ್ನು ಪ್ರಕಟಿಸಬಾರದೆ?

–ವಾಸುಕಿ. ಸಿ.ಜಿ., ಶಿರಸಿ

### ಡಬ್ಬಾ–ವಾಲಾರ ಶಿಸ್ತು ಶ್ಲಾಘನೀಯ

ಡಬ್ಬಾ ವಾಲಾಗಳ ಅಲಿಖಿತ ಶಿಸ್ತು ಹಾಗೂ ಪ್ರಾಮಾಣಿಕತೆ ಸಾಟಿಯಿಲ್ಲದ್ದು. ಶಿವಬಿಲ್ಲವ ನಾಯ್ಕನಕಟ್ಟೆಯವರ ಬರಹ ಚೆನ್ನಾಗಿತ್ತು.

–ಟಿ.ಎಸ್. ಸರಸ್ವತಿ, ತಿಪಟೂರು/ ಎಂ.ಸರ್ದಾರ್, ಅರಸೀಕೆರೆ/ ಬಿ.ಎಸ್.ಮಳ್ಳೂರ, ಹಲಗತ್ತಿ

### ಅಪೂರ್ವ ಮಾಹಿತಿ

ನಾಸಾ ಲೋಕದಲ್ಲಿ ನಮ್ಮನ್ನೂ ಸುತ್ತಾಡಿಸಿ ಅಲ್ಲಿನ ಅಪೂರ್ವ ಮಾಹಿತಿಗಳನ್ನು ತಿಳಿಸಿದ ಎನ್.ಎಸ್. ಶಾರದರಿಗೆ ವಂದನೆಗಳು.

–ಬಿ.ಎಸ್. ರಮೇಶ್, ಬೆಂಗಳೂರು

### ಚಿಂತನಾರ್ಹ ಬರಹ

ಎ.ಕೆ. ಕುಕ್ಕಿಲರ 'ಸುದ್ದಿ ಎಂಬ ಜಂಕ್ ಫುಡ್!' ಲೇಖನ ಚಿಂತನಾರ್ಹವೆನಿಸಿತು. ಅತಿಯಾದರೆ ಅಮೃತವೂ ವಿಷವಾದಂತೆ, ದಿನದ 24 ತಾಸೂ ಸುದ್ದಿ ಪ್ರಸಾರ ಸರಿಯಲ್ಲ.

–ರಾಜಶೇಖರ ಗೌಡ, ಕೊಟ್ಟೂರು

### 'ಸುಧಾ'ಳಿಗೆ ಅಭಿನಂದನೆಗಳು




ಐಆರ್‌ಎಸ್ ವರದಿಯ ಪ್ರಕಾರ ನಮ್ಮ 'ಸುಧಾ'ಕ್ಕೆ ಸರಾಸರಿ ಓದುಗರ ಸಂಖ್ಯೆ 3.50 ಲಕ್ಷ! ಹೀಗಾಗಿ 'ಸುಧಾ' ಕನ್ನಡದ ವಾರಪತ್ರಿಕೆಗಳಲ್ಲಿಯೇ ನಂಬರ್ 1. ಹಾರ್ದಿಕ ಅಭಿನಂದನೆಗಳು, ಇನ್ನೊಮ್ಮೆ... ಮಗದೊಮ್ಮೆ... ಸುಖೀಭವ, ನೀವು ಕೇಳಿದಿರಿ, ಸುದ್ದಿ ಸ್ವಾರಸ್ಯ, ಜಾಣರ ಪೆಟ್ಟಿಗೆಯಂತಹ ಕಾಲಂಗಳ ಜತೆಗೆ ತನ್ನ ವೈವಿಧ್ಯಮಯ ಲೇಖನಗಳಿಂದ ಎಲ್ಲ ವರ್ಗದ ಓದುಗರ ಮನ ಗೆದ್ದಿರುವ 'ಸುಧಾ' ನೂರ್ಕಾಲ ಬಾಳಲಿ, ಜನ ಸಾಮಾನ್ಯರ ಜ್ಞಾನ ಹೆಚ್ಚಿಸಲಿ.

–ನಾರಾಯಣಯಾಜಿ ಶಿರಾಲಿ, ಚಿಕ್ಕಮಗಳೂರು/ ಕೆ.ಎಸ್.ಚಂದ್ರ, ಕೌಡ್ಲೆ/ ಮೊಳಕಾಲ್ಮುರು ಸುರೇಶ್, ಬಳ್ಳಾರಿ/ ಎಸ್.ವನಜಾ, ಹಾಸನ

